# ತತ್ವಪದಗಳ ಪರಂಪರೆ ಮತ್ತು ಜಾತಿಯ ಕಲ್ಪನೆ

**ಡಾ. ಡಿ. ಕೆ. ನಟರಾಜ**[1]
ಕನ್ನಡ ಸಹ ಪ್ರಾಧ್ಯಾಪಕರು,
ಸರ್ಕಾರಿ ಆರ್.ಸಿ.ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು,
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560001.
dknraja@gmail.com

**ಗಂಗರೇವಯ್ಯ ಎಸ್. ಸಿ.**[2]
ಸಂಶೋಧನಾ ವಿದ್ಯಾರ್ಥಿ
ಹಂಪಿ ಕನ್ನಡ ವಿಶ್ವವಿದ್ಯಾಲಯ.

**Article Link: https://aksharasurya.com/2023/06/d-k-nataraja-ganga-revaiah-s-c/**

ತತ್ವಪದ, ಭಜನೆಪದ, ತತ್ವ ಮುಂತಾದ ಹೆಸರಿನಿಂದ ಕರೆಯುವ ಅನುಭವ ಸಾಹಿತ್ಯವೊಂದು ಈ ನಾಡಿನ ಉದ್ದಕ್ಕೂ ಈ ನೆಲದ ತಾತ್ವಿಕ ಚಿಂತನೆಯನ್ನು ನಿಸರ್ಗ ವಿವೇಕದ ಜೊತೆ ಬೆರೆಸುತ್ತ ಈ ಸಮಾಜದಲ್ಲಿರುವ ವಿವಿಧ ಜಾತಿ, ಜನಾಂಗ, ಸಮುದಾಯಗಳ ಚಿಂತನಾ ಕ್ರಮವನ್ನು ಉತ್ತಮ ಆರೋಗ್ಯವಾಗಿರುವಂತೆ ನೋಡಿಕೊಳ್ಳುತ್ತಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಲ್ಲಿಯವರೆಗೆ ಸಿಕ್ಕಿರುವ ಬಹುಮುಖ್ಯ ಪ್ರಕಾರವೆಂದರೆ ತತ್ವಪದಗಳು. ಈ ಕನ್ನಡ ನಾಡಿನ ಜೀವಂತ ಪರಂಪರೆಯಾಗಿವೆ. ತತ್ವಪದಕಾರರದ್ದು ಒಂದು ವಿಶಿಷ್ಟ ಭಿನ್ನ ಜೀವನ ಕ್ರಮವೂ ಹೌದು, ಕನ್ನಡನಾಡಿನ ಉದ್ದಗಲಕ್ಕೂ ಇರುವ ಈ ಪರಂಪರೆಯ ತಾತ್ವಿಕ ಅಭಿವ್ಯಕ್ತಿಯ ವಿಸ್ತಾರವಾದ ಅಧ್ಯಯನವು ಈ ನಾಡಿನ ಜನರ ಬದುಕಿನ ಸ್ಥಿತಿಯನ್ನು ಅರಿತುಕೊಳ್ಳುವ ಮಾರ್ಗವಾಗಿದೆ.

ಭಾರತೀಯ ಶ್ರಮಣಧಾರೆಗಳೆಂದು ಗುರುತಿಸುವ ಬೌದ್ಧ, ಜೈನ, ನಾಥ, ಅವಧೂತ, ಸಿದ್ಧ, ಸೂಫಿ, ಷಟ್‌ಸ್ಥಲ, ಅಚಲ, ಅದ್ವೈತ ಮುಂತಾದ ಧಾರೆಗಳ ತಾತ್ವಿಕತೆಯನ್ನು ಕಾಣಬಹುದು. ತತ್ವಪದಕಾರರ ಪರಂಪರೆ ಇಂದಿಗೂ ಸಹ ಜೀವಂತವಾಗಿರುವ ಪರಂಪರೆ ಆಗಿದೆ. ಅನೇಕ ಪರಂಪರೆಗಳಿಂದ ಕೂಡಿರುವ ಈ ಸಮಾಜವನ್ನು ಸಿದ್ಧಪರಂಪರೆ ಎಂದು ಗುರುತಿಸುವ ರೂಢಿಯಿದೆ. ಸಿದ್ಧರೂ,

ಆರೂಢರೂ, ಆಚಲಿಗರು, ಗುರುಮಕ್ಕಳು, ಗುರುದೀಕ್ಷೆ ತೆಗೆದುಕೊಂಡವರು, ಶಿವಯೋಗಿಗಳು ಬಯಲಸಾಧಕರು, ಅದ್ವಯಸಾಧಕರು ಮುಂತಾದ ರೀತಿಯಲ್ಲಿ ಕರೆಸಿಕೊಳ್ಳುವ ಈ ಸಾಧಕರಲ್ಲಿ ಅನೇಕ ಚಿಂತನ ಧಾರೆಗಳಿವೆ ಸೂಫಿ, ನಿಜಗುಣರ ಷಟ್‌ಸ್ಥಳ, ಶಾಕ್ತ, ಬೌದ್ಧ ದಶಭೂಮಿ ಸಾಧನೆಯ ಎಂಟನೆಯ ಸ್ಥಲವಾದ ಅಚಲ ಮುಂತಾದ ಮಾರ್ಗಗಳ ಸಾಧಕರನ್ನು ಈ ಸಮಾಜದಲ್ಲಿ ಕಾಣಬಹುದು. ತತ್ವಪದಕಾರರ ಪಂಥಕ್ಕೆ ತಾತ್ವಿಕತೆಯ ದೃಷ್ಟಿಯಿಂದ ಸಿದ್ದಪರಂಪರೆಗೆ ಅಖಿಲ ಭಾರತದ ವ್ಯಾಪ್ತಿಯಿದೆ. ಭಾರತದ ಉದ್ದಗಲಕ್ಕೂ ಇರುವ ಈ ಪರಂಪರೆ ಇಂದಿಗೂ ಸಹ ಈ ಸಮಾಜದಲ್ಲಿ ಅತ್ಯಂತ ಪ್ರಭಾವೀ ಪಂಥವಾಗಿದ್ದು ಅಸಂಖ್ಯಾತ ಅನುಯಾಯಿಗಳನ್ನು ಪಡೆದಿದೆ. ಭಾರತೀಯ ಶ್ರಮಣ ಪರಂಪರೆಯನ್ನು ಬುದ್ಧನ ಪೂರ್ವ ಕಾಲದಿಂದಲೂ ಗುರುತಿಸಬಹುದು. ಪಾರಂಪರಿಕವಾದಂತಹ ವೈದಿಕರ ಧಾರ್ಮಿಕ ಮತ್ತು ಸಾಮಾಜಿಕ ಯಜಮಾನ್ಯವನ್ನು ಒಪ್ಪಿಕೊಳ್ಳದ ಈ ಪರಂಪರೆಗಳು ವೇದವನ್ನು ತಿರಸ್ಕರಿಸುತ್ತವೆ.

ವೈದಿಕ ಪರಂಪರೆಯನ್ನು ಪ್ರಚೋಸಿದ ವರ್ಣಾಶ್ರಮ, ಜಾತಿವ್ಯವಸ್ಥೆಯನ್ನು ಕಟುವಾಗಿ ವಿರೋಧಿಸುತ್ತವೆ. ಮುಕ್ತಿ ಎಲ್ಲರಿಗೂ ದೊರಕಲು ಸಾಧ್ಯವೆಂಬ ಸಮಾನತೆಯನ್ನು ಮುಂದಿಡುತ್ತವೆ. ತತ್ವಪದಕಾರರು ಜ್ಞಾನ ಮಾರ್ಗದಿಂದ ಮುಕ್ತಿ ಸಾಧ್ಯ ಎಂದು ತಿಳಿಸಿದರು. ಸ್ವಂತ ಆಲೋಚನೆಯಿಂದ ವಿಶ್ವದ ಸತ್ಯವನ್ನು ಎಲ್ಲರೂ ಅರಿತುಕೊಳ್ಳಲು ಸಾಧ್ಯವೆಂದು ಸಾರುತ್ತವೆ. ಈ ಪರಂಪರೆಗಳಿಗೆ ತಮ್ಮ ಅರಿವಿನ ಪ್ರಚಾರದ ಹೊರತಾಗಿ ಬೇರೆ ಯಾವುದೇ ಅಧಿಕಾರದ ಹಂಬಲ ಕಾಣಲು ಸಾಧ್ಯವಿಲ್ಲ. ತತ್ವಪದಕಾರರ ಪರಂಪರೆಯಿಂದ ಆಚರಣೆ. ವಿಧಿ ನಿಷೇಧಗಳು ಮತ್ತು ಹೆಚ್ಚು ದೊರಕುವ ಸಾಹಿತ್ಯವು ಈ ಪಂಥದ ತಾತ್ವಿಕತೆಯನ್ನು ತಿಳಿಯಲು ಸಹಾಯ ಮಾಡುತ್ತವೆ. ಒಂದೊಂದು ಪಂಥಗಳ ತಾತ್ವಿಕ ನಿಲುವುಗಳು, ಆಚರಣೆಗಳು ಅಭಿವ್ಯಕ್ತಿ ಕ್ರಮಗಳು ಆಯಾ ಪಂಥಗಳ ವಿಶಿಷ್ಟ ಸಂಗತಿಯಾಗಿರುತ್ತವೆ. ಈ ಪಂಥಗಳ ನಡುವೆ ಅನೇಕ ಸಮಾನ ಅಂಶಗಳು ಇದ್ದರೂ ಸಹ ತಮ್ಮತಮ್ಮ ಪಂಥಗಳ ಪ್ರತ್ಯೇಕತೆಯನ್ನು ಬಹು ಎಚ್ಚರದಿಂದ ಕಾಯ್ದುಕೊಂಡಿರುವುದನ್ನು ಕಾಣಬಹುದಲ್ಲದ ಕೆಲವು ಪ್ರಮುಖ ಸಮಾನ ಅಂಶಗಳನ್ನು ನೋಡಬಹುದಾಗಿದೆ.

ಇವೆಲ್ಲ ಗುರು ಪಂಥಕ್ಕೆ ಸೇರಿದವುಗಳು ದೈವಮಾರ್ಗಗಳಲ್ಲಿ ಇಲ್ಲಿ ಗುರುವೇ ಸರ್ವಸ್ವ ತನ್ನ ಸಾಧನೆಗೆ ಮಾರ್ಗದರ್ಶನಕ್ಕಾಗಿ ಗುರುವೊಬ್ಬ ಬೇಕೇ ಬೇಕು. ಗುರುವಿಲ್ಲದೆ ಸಾಧನೆ ಪೂರ್ಣವಾಗುವುದಿಲ್ಲ. ಗುರು

ಶಿವಸ್ವರೂಪಿಯಾದವನು ಅರಿವಿನ ಮೂರ್ತರೂಪ ವ್ಯಕ್ತಿರೂಪದ ಗುರು ಸಂಕೇತ ಮಾತ್ರ ನಿಜವಾದ ಅರಿವೇ ಗುರು ಒಮ್ಮೆ ಗುರುವಿನಿಂದ ದೀಕ್ಷೆ ಪಡೆದ ಸಾಧಕನಿಗೆ ನಿರಂತರವಾಗಿ ಅವನ ಮಾರ್ಗದರ್ಶನ ಇರಬೇಕು ಎಂಬ ನಿಯಮವಿಲ್ಲ. ಸಾಧಕನಾಗಿ ಶಿಷ್ಯನೂ ಸ್ವತಂತ್ರನಾಗಿ ಇರಬಹುದು. ಗುರುವಿನಿಂದ ದೀಕ್ಷೆ ತೆಗೆದುಕೊಂಡವರನ್ನು 'ಗುರುಮಕ್ಕಳು' ಎಂದು ಗುರುತಿಸುತ್ತಾರೆ. ಇದು ಯಾವುದೇ ಒತ್ತಾಯವಿಲ್ಲದೇ ತಾನಾಗಿ ಸ್ವಇಚ್ಛೆಪಟ್ಟು ಆಯ್ಕೆ ಮಾಡಿಕೊಳ್ಳುವ ದಾರಿಯಾಗಿದೆ. ಗುರುವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಶಿಷ್ಯನಿಗಿರುವಂತೆಯೇ ಗುರುವಿಗೆ ಶಿಷ್ಯನ ಆಯ್ಕೆಯ ಸ್ವಾತಂತ್ರ್ಯವಿದೆ. ಗುರು ಮಕ್ಕಳಾದವರಿಗೆ ಲೌಕಿಕ ಮತ್ತು ಪಾರಮಾರ್ಥಿಕವೆರಡೂ ಸಮಾನ ಸಂಗತಿಗಳು. ಗುರುವಿನ ಕಲ್ಪನೆಯು ಆಯಾ ಪಂಥಗಳ ಸಾಧನಾ ಮಾರ್ಗಕ್ಕನುಗುಣವಾಗಿ ಭಿನ್ನವಾಗಿ ಇದೆ. ಒಂದು ಮಾರ್ಗದಲ್ಲಿ ಶಿಕ್ಷಗುರು, ದೀಕ್ಷಗುರು, ಮೋಕ್ಷಗುರು, ಗುರುವಿನ ಗುರು ಮತ್ತು ಪರಮಗುರುವೆಂಬ ಬೇರೆ ಬೇರೆ ಕಲ್ಪನೆಗಳಿವೆ ತಾಯಿ ತಂದೆಯರನ್ನು ಶಿಕ್ಷಗುರುಗಳೆಂದೂ ಧರ್ಮ, ಮೋಕ್ಷ ವಿಷಯಗಳಲ್ಲಿ ದೀಕ್ಷೆ ನೀಡಿ ಮಂತ್ರೋಪದೇಶವನ್ನು ಮಾಡುವವರನ್ನು ದೀಕ್ಷಾಗುರುಗಳೆಂದೂ ಕರೆದು ಇವರಿಂದ ಮೋಕ್ಷ ಪ್ರಧಾನ ಸಾಧ್ಯವಿಲ್ಲವೆಂದೂ ತಮ್ಮ ತಮ್ಮ ದೇಹದಲ್ಲಿಯೇ ಇರುವ ಮೋಕ್ಷಗುರು, ಗುರುವಿನ ಗುರು ಮತ್ತು ಪರಮಗುರು ಮಾತ್ರ ಮೋಕ್ಷಕ್ಕೆ ಕರೆದುಕೊಂಡು ಹೋಗುವರು ಎಂದು ಭಾವಿಸುತ್ತಾರೆ.

ಗುರುವಿನಿಂದ ದೀಕ್ಷೆ ಪಡೆದ ಸಾಧಕರು ನಿರಂತರ ಸಾಧನೆಯ ಹಾದಿಯಲ್ಲಿರುತ್ತಾರೆ ನಿಗಧಿತ ಸಮಯಗಳಲ್ಲಿ ನಿಗದಿತ ಸ್ಥಳಗಳಲ್ಲಿ ಒಟ್ಟಿಗೆ ಸೇರಿ ತತ್ವ ಚಿಂತನೆ ನಡೆಸುತ್ತಾರೆ. ಊರಿನ ದೇವಸ್ಥಾನ ಆಗಬಹುದು. ಪಾಳು ಗುಡಿಗಳಾಗಬಹುದು, ಅಲ್ಲಿ ಸೇರಿ ತತ್ವಪದಗಳನ್ನು ಹಾಡುತ್ತಾರೆ. ತತ್ವ ಚಿಂತನೆ ನಡೆಸುತ್ತಾರೆ. ಸಾಮಾನ್ಯವಾಗಿ ಅಮಾವಾಸ್ಯೆ ಹುಣ್ಣಿಮೆ ಮತ್ತು ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಗುರುಪರಂಪರೆಗೆ ಸೇರಿದವರು ಎಲ್ಲರೂ ಒಟ್ಟಿಗೆ ಸೇರುತ್ತಾರೆ.

ಗುರುವಿನ ದೀಕ್ಷೆ ಪಡೆದ ಸಾಧಕರೆಲ್ಲ ಸಾವಿನ ಸಂದರ್ಭದಲ್ಲಿ ಕುಲ–ಜಾತಿ ಕಟ್ಟು ಕಟ್ಟಳೆ ಇಲ್ಲದೆ ಸಾವನ್ನು ಶೋಕವನ್ನಾಗಿ ಆಚರಿಸುವುದಿಲ್ಲ ಬದಲಿಗೆ ಎಲ್ಲರೂ ಒಂದೆಡೆ ಕುಳಿತು ತತ್ವಪದ ಹಾಡುತ್ತಾರೆ ಉತ್ತರ ಕ್ರಿಯಾಧಿಗಳಲ್ಲಿ ಎಲ್ಲರೂ ಭಾಗವಹಿಸುತ್ತಾರೆ ಗುರುಮಕ್ಕಳನ್ನೂ ಎಲ್ಲರೂ ಮುಟ್ಟಿ ಸಂಸ್ಕಾರ ಮಾಡುತ್ತಾರೆ

ಜಾತ್ಯಾತೀತವಾದ ಜೀವಂತ ಪರಂಪರೆಯೆಂದು ಈ ಸಮಾಜದಲ್ಲಿ ಇದೆ ಎಂದು ಹೇಳಬಹುದಾದರೆ ತತ್ವಪದಕಾರರಲ್ಲಿ ಮಾತ್ರ ಕಾಣಬಹುದು.

ಗುರುಪರಂಪರೆ ಉತ್ತರ ಕರ್ನಾಟಕದಲ್ಲಿ ಮಾತ್ರ ಸಮೃದ್ಧವಾಗಿದೆ ಎಂಬ ಸಾಮಾನ್ಯ ಅಭಿಪ್ರಾಯವನ್ನು ತಳ್ಳಿಹಾಕಿ ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿಯೂ ಈ ಪರಂಪರೆಯ ಇರುವಿಕೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಮತ್ತು ಗಡಿನಾಡಿನ ಭಾಗಗಳಲ್ಲಿ ವಿಸ್ತಾರಗೊಂಡಿದೆ. ಹಾಗೆಯೇ ತತ್ವಪದಕಾರರಲ್ಲಿ ಗುರುಪರಂಪರೆ ಕರ್ನಾಟಕಕ್ಕೆ ಸೀಮಿತವಾಗಿರುವ ಪ್ರಕಾರವಲ್ಲ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲೂ ತತ್ವಪದಗಳಿರುವುದರಿಂದ ಅಲ್ಲೂ ಸಹ ಗುರುಪರಂಪರೆ ಇರುವುದನ್ನು ಕಾಣಬಹುದು ನಾಡಿನಾದ್ಯಂತ ಸಾವಿರಾರು ಹಳ್ಳಿಗಳು ಹಾಳು ಗುಡಿಗಳು, ಬೆಟ್ಟ–ಗುಡ್ಡಗಳು, ಗುರುಪರಂಪರೆಗೆ ಸೇರಿದ ತತ್ವಪದಕಾರರ ತಾಣಗಳಾಗಿವೆ.

ಗುರುವಿನ ಮಾರ್ಗದರ್ಶನದಲ್ಲಿ ನಡೆಯುವ ಈ ಸಾಧನೆ ಹಲವು ಹಂತಗಳಲ್ಲಿ ಸಿದ್ಧಿಯಾಗುವುದು ತತ್ವಪದಕಾರರಲ್ಲಿ ಸಾಮಾನ್ಯವಾಗಿ ಭಕ್ತಿ, ವೈರಾಯ, ತಾರಕ, ಸಾಂಖ್ಯ, ಮತ್ತು ಅಮನಸ್ಕ ರಾಜಯೋಗವೆಂಬ ಸ್ಥಲಕಲ್ಪನೆ ಇದೆ. ತತ್ವಪದಕಾರರಾದ ನಿಜಗುಣ ಶಿವಯೋಗಿಗಳು, ಬಾಲಲೀಲಾಮಹಾಂತ, ಘನಮಠದಾರ್ಯ, ಸರ್ಪಭೂಷಣ ಶಿವಯೋಗಿಗಳು, ಬಸವಲಿಂಗಶರಣ ಮುಂತಾದ ತತ್ವಪದಕಾರರ ಸ್ಥಳ ಕಲ್ಪನೆಯಲ್ಲಿ ಶಿವಕಾರುಣ್ಯಸ್ಥಲ ಸಂಬೋಧನ ಸ್ಥಳ ನೀತಿ ಕ್ರಿಯಾಚರ್ಯ ಸ್ಥಳ ಯೋಗಪ್ರತಿಪಾದನಸ್ಥಲ ಜ್ಞಾನ ಪ್ರತಿಪಾದನಸ್ಥಳ ಎಂಬ ಸಾಧನಾ ಹಂತಗಳನ್ನು ನೋಡಬಹುದು.

ತತ್ವಪದಕಾರರಲ್ಲಿ ಧರ್ಮದ, ಜಾತಿಯ, ಭಾಷೆಯ ಗಡಿಗಳಿಲ್ಲ ಜಾತಿ–ಧರ್ಮದ ಎಲ್ಲೆಗಳನ್ನು ಮೀರಿದ ವಿಶ್ವಕುಟುಂಬಿಯ ಮನೋಭಾವ ಇವರಲ್ಲಿ ಕಾಣಬಹುದು ಎಲ್ಲದೆ ಇವರಲ್ಲಿ ಲಿಂಗ ಅಸಮಾನೆಗೆ ಸ್ಥಳವಿಲ್ಲ ಆದರೆ ಅವರಲ್ಲಿ ಗುಪ್ತವಾಗಿ ಇರಬಹುದಾದ ಸಾಧನೆಯಲ್ಲಿ ಹೆಣ್ಣು ಬಹಳ ಸಾರಿ 'ಸಾಂಕೇತಿಕ' ಬಳಕೆಯಾಗಿರುವುದನ್ನು ಗಮನಿಸಬಹುದು.

ತತ್ವಪದಕಾರರು ವರ್ಣಾಶ್ರಮ ವ್ಯವಸ್ಥೆಯನ್ನು ಜಾತಿ, ಸೂತಕಗಳನ್ನು ಮಾನ್ಯ ಮಾಡುವುದಿಲ್ಲ ಲಿಂಗ–ಅಸಮಾನತೆ, ಮುಟ್ಟು ಮೈಲಿಗೆಯಾಗಲೀ ಇಲ್ಲ ಇಲ್ಲಿ

ಎಲ್ಲರು ಸಮಾನರು, ಎಂದು ಕಡಕೋಳ ಮಡಿವಾಳಪ್ಪನವರ ಈ ತತ್ವಪದ ನಾಡಿನ ಉದ್ದಕ್ಕೂ ಪ್ರಚಲಿತದಲ್ಲಿರುವುದನ್ನು ಕಾಣಬಹುದು.

ಮುಡಚಟ್ಟಿನೊಳು ಬಂದು ಮುಟ್ಟಿ ತಟ್ಟೀ ಎನುತ್ತಿರ
ಮುಡಚಟ್ಟು ಎಲ್ಯಾದ್ಹೇಳಣ್ಣ
ಮುಟ್ಟಾದ ಮೂರು ದಿನಕ್ಕೆ ಹುಟ್ಟಿ ಬಂದಿದೀ ನೀನು
ಮುಡಚಟ್ಟು ಎಲ್ಲಾದ್ಹೇಳಣ್ಣ
ತೊಗಲೊಳು ತೊಗಲೊಕ್ಕು ತಗಲಿಬಂದವ ನೀನು
ತಗಲ ಮಾತಾಡುವ ದೇನಣ್ಣ
ಇದರ ಬಗಿಯ ತಿಳಿಯದೆ ವಗದು ಮಾತನಾಡಿದರೆ
ನಗಿಗೇಡಿ ಕಾಣುತಾದಣ್ಣ

ಎಲುವಿನಾಲಯದೊಳು ಒಳಗ್ಹೊಕ್ಕು ನೀ ಕುಂತು
ಓಡ್ಯಾಡಬೇಡ ನೀ ಕೇಳಣ್ಣ
ಎಲವು ತೊಗಲ ಮೂಲಮೂತ್ರ ಮಾಂಸವು
ನಿನ್ನಲ್ಲಿ ಕಾಣುತಾದಣ್ಣ

ಊರನರಕವ ತಿಂದು ಬೋರ್ಯಾಡ್ಹಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣ
ಅದರ ಸ್ವಾದ್ಹತ್ತಿ ನೀ ಉಂಡು ಗಂಡಾಗಿ ಕುಂತೀದಿ
ಶೀಲ ಎಲ್ಲಿ ಉಳಿತ್ಹೇಳಣ್ಣ

ಊರ ಬಾವಿಯ ನೀರ ದಾರಾದರು ತರುವರು
ನೀನನ್ನ ನೀರ ಬ್ಯಾರ್ಯಾ ವೇನಣ್ಣ
ಲಂಡೇನ್ಹಳ್ಳ ಬಂದು ನದಿಯ ಕೂಡಿದ ಮೇಲೆ
ನೈವೇದ್ಯ ಹೇಗಾದವು ಹೇಳಣ್ಣ
ಸೂಸಲಾಡುವ ದೇಹ ಸೋಸಿ ನೀರವ ಮಾಡಿ
ಮಡಿ ಮಾಡಿಕೊಳ್ಳು ಬೇಕಣ್ಣ
ನಮ್ಮ ಧೀರ ಮಹಾಂತೇಶನ ಬಿಡದೆ ಕೊಂಡಾಡಿದರೆ
ಕಡಿತನಕ ಮಡಿಯಾಗುವರಣ್ಣ

ತತ್ವಪದಕಾರರು ಮುಕ್ತಿಯ ಬಾಗಿಲನ್ನು ಎಲ್ಲರಿಗೂ ತೆರೆದಿದ್ದಾರೆ. ಅಲ್ಲಿ ಜಾತಿ ಆಧಾರಿತ ಕಲ್ಪನೆಗೆ ಅವಕಾಶವಿಲ್ಲ ಜ್ಞಾನಮಾರ್ಗದಿಂದ ಮಾತ್ರ ಮುಕ್ತಿ ಸಾಧ್ಯ ಎಂಬುದು. ತತ್ವಪದಕಾರರ ನಂಬಿಕೆ ತತ್ವಮಾರ್ಗವು ಯಾವುದೇ ಧರ್ಮ,

ಪಂಥಗಳಿಗೂ ಒಳಗಾಗದೆ ಎಲ್ಲ ಜಾತಿ, ಜನಾಂಗದ, ಧರ್ಮದ ಸಮುದಾಯಗಳಿಗೆ ಸೇರಿದ ಎಲ್ಲರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಪ್ರಯತ್ನ ಎಂಬುದನ್ನು ಈ ತತ್ವಪದದಿಂದ ತಿಳಿಯಬಹುದಾಗಿದೆ.

ಸರ್ವರಧಿಕಾರಿಗಳು ಎನಿಸಿಕೊಂಬರು ಮಗನೆ
ಉರ್ವಿಗತಿಶಯದವಾದ ಮುಕ್ತಿ ಹೊಂದಲಿಕೆ

ನೆರೆಜಾಣನಾಗಿರಲಿ ಮುರ್ಖನಾಗಿರಲಿ
ಸಿರಿವಂತನಾಗಿರಲಿ ದಾರಿದ್ರನಾಗಿರಲಿ
ಹಿರಿಯನೆಂದೆನಿಸಿರಲಿ ಕಿರಿಯನೆಂದೆನಿಸಿರಲಿ
ಉರುನಿರಕ್ಷರಕುಕ್ಷಿ ಶಾಸ್ತ್ರಿಯಾಗಿರಲಿ
ಆದಿವರ್ನದ ಕ್ಷತ್ರಿ ವೈಶ್ಯನಾಗಿರಲಿ
ಶೂದ್ರ ಹೂಣ ಕಿರಾತ ಮ್ಲೇಂಛನಾಗಿರಲಿ
ಭೇದ ಮತ ಚಾರ್ವಾಕ ಕಾಳನಾಗಿರಲಿ
ವ್ಯಾಧ ಕುಟುಕಾಂಬಷ್ಟ ಭ್ರಷ್ಟನಾಗಿರಲಿ ॥ಸರ್ವ॥

ಕುಲದಿ ಹೊಗಳಿಸಿಕೊಳ್ಳಲಿ ಕುಲಗೇಡಿಯಾಗಿರಲಿ
ಇಳೆಯೊಳಗೆ ಪಾಷಾಂಡಿ ಪಾಪಿಯಾಗಿರಲಿ
ಬಲು ಕೃಪಣಾಗಿರಲಿ ಧರ್ಮಿಯಾಗಿರಲಿ
ಹೇಳವ ಕುಂಟ ಕುರೂಪಿ ಚಲುವನಾಗಿರಲಿ ॥ಸರ್ವ॥

ತತ್ವಪದಕಾರರಲ್ಲಿ ಬ್ರಾಹ್ಮಣನಿಂದ ಹಿಡಿದು ಅಂತ್ಯ ಜನರವರೆಗೆ ಈ ಸಮಾಜದಲ್ಲಿ ಎಲ್ಲರು ಇದ್ದಾರೆ. ಒಮ್ಮೆ ಈ ಪರಂಪರೆಯ ಅಧೀನಕ್ಕೆ ಬಂದರೆ ಸಮಾಜದಲ್ಲಿರುವ ಅಸಮಾನತೆಗಳೆಲ್ಲ ಕಳಚಿ ಬೀಳುತ್ತವೆ. ದೇಹವನ್ನೇ ಸಾಧನೆಯ ವೇದಿಕೆ ಮಾಡಿಕೊಂಡು ಯೋಗ ಮಾರ್ಗದ ಮೂಲಕ ತತ್ವಪದಕಾರರು ಸಾಮಾಜಿಕ ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸಿದರು. ಲೋಕದ ಅನುಸಂಧಾನ ದೇಹದ ಮೂಲಕವೇ ನಡೆಯುತ್ತಿರುವುದರಿಂದ ಸತ್ಯದ ಅನುಸಂಧಾನಕ್ಕೆ ಹೊರಗಿನ ಯಾವ ಕುರುಹುಗಳನ್ನು ಸಾಧಕರು ಮಾನ್ಯ ಮಾಡುವುದಿಲ್ಲ. ಹಾಗಾಗಿ ವೇದಶಾಸ್ತ್ರ ಪುರಾಣಗಳೆಂಬ ಶಬ್ಧ ಪ್ರಮಾಣಗಳು ನಿರಾಕರಣೆಗೊಳ್ಳುತ್ತವೆ. ಅವುಗಳ ಮೂಲಕ ಸಮಾಜದಲ್ಲಿ ನಡೆಯುವ ತಾರತಮ್ಯವೂ ತಾನಾಗಿ ನಿರಾಕರಣಗೊಳ್ಳುತ್ತದೆ.

**ಪರಾಮರ್ಶನ ಗ್ರಂಥಗಳು:**


1. ತನ್ನ ತಾನು ತಿಳಿದ ಮೇಲೆ, ಡಾ. ಮೀನಾಕ್ಷಿಬಾಳಿ, ಶ್ರೀ ವೀರೇಶ್ವರ ಪ್ರಕಾಶನ, 2006, ಶ್ರೀ ಮಡಿವಾಳೇಶ್ವರ ಮಠ, ಕಡಕೋಳ.
2. ಶಿಶುನಾಳ ಶರೀಪರ ಗೀತೆಗಳು, ಡಾ. ಶಿವಾನಂದ ಗುಬ್ಬಣ್ಣನವರ (ಸಂ), ಅಕ್ಷರ ಪ್ರಕಾಶನ, ಧಾರವಾಡ, 2002.
3. ಕಡಕೋಳ ಮಡಿವಾಳಪ್ಪನವರು, ಎಲ್. ಬಿ. ಕೆ. ಅಲ್ದಾಳ, ಕನ್ನಡ ಸಾಹಿತ್ಯ ಪರಿಷತ್ತು, 2018.
4. ಎಲ್ಲ ಜಾತಿಯ ಮರಗಳ ಕಾಡು, ತತ್ವಪದಕಾರರು, ಅಭಿನವ ಪ್ರಕಾಶನ, ರಾಜಾಜಿನಗರ, ಬೆಂಗಳೂರು, 1995.